# ಐಪಿಎಲ್ ಸ್ಟಾರ್

## ಶಾರ್ದೂಲ್ ಠಾಕೂರ್

ಭಾರತ ಮತ್ತು ಇಂಗ್ಲೆಂಡ್ ನಡುವಣ ಟೆಸ್ಟ್ ಸರಣಿಯ ವೇಳೆ ಬ್ಯಾಟಿಂಗ್‌ನಿಂದ ಗಮನ ಸೆಳೆದ ಶಾರ್ದೂಲ್ ಠಾಕೂರ್ ಮಹಾರಾಷ್ಟ್ರದವರು.

2012–13ರ ದೇಶಿ ಋತುವಿನಲ್ಲಿ ರಣಜಿ ಟೂರ್ನಿಯಲ್ಲಿ ಮುಂಬೈ ತಂಡವನ್ನು ಪ್ರತಿನಿಧಿಸಿ ರಾಜಸ್ಥಾನ ವಿರುದ್ಧ ಪದಾರ್ಪಣೆ ಮಾಡಿದ್ದರು. ನಂತರದ ಎರಡೂ ವರ್ಷ ರಣಜಿ ಟೂರ್ನಿಯಲ್ಲಿ ಕ್ರಮವಾಗಿ ಒಟ್ಟು 27 ಹಾಗೂ 48 ವಿಕೆಟ್‌ಗಳನ್ನು ಕಬಳಿಸಿ ಗಮನ ಸೆಳೆದರು. 2015–16ರ ರಣಜಿ ಫೈನಲ್‌ನಲ್ಲಿ ಸೌರಾಷ್ಟ್ರ ತಂಡದ ಎಂಟು ವಿಕೆಟ್‌ಗಳನ್ನು ಕಬಳಿಸಿ ಮುಂಬೈ 41ನೇ ರಣಜಿ ಟ್ರೋಫಿ ಎತ್ತಿ ಹಿಡಿಯಲು ಕಾರಣರಾದರು.

ದೇಶಿ ಟೂರ್ನಿಗಳಿಗೆ ಬಂದು ಮರುವರ್ಷವೇ ಅವರು ಐಪಿಎಲ್‌ನಲ್ಲಿ ‘ಕಿಂಗ್ಸ್ ಇಲೆವೆನ್ ಪಂಜಾಬ್’ ತಂಡದಲ್ಲಿ ಆಡಿದ್ದರು. ಬಳಿಕ ‘ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್’ ಹಾಗೂ ‘ಚೆನ್ನೈ ಸೂಪರ್ ಕಿಂಗ್ಸ್’ ತಂಡದಲ್ಲಿದ್ದರು. ಐಪಿಎಲ್‌ನಲ್ಲಿ ತೋರಿದ ಪ್ರದರ್ಶನದಿಂದಾಗಿ 2016ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೆ 16 ಆಟಗಾರರ ತಂಡದಲ್ಲಿ ಸ್ಥಾನ ಗಳಿಸಿ ‘ಬೆಂಚ್’ ಕಾದು ಬಂದರು.

2017ರಲ್ಲಿ ಶ್ರೀಲಂಕಾ ವಿರುದ್ಧದ ಸರಣಿಯಲ್ಲಿ ಆಡುವ ಮೂಲಕ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದರು. ಇದರ ಮುಂದಿನ ವರ್ಷವೇ ದಕ್ಷಿಣ ಆಫ್ರಿಕಾ ಎದುರು ಟಿ–20 ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಅವಕಾಶ ಪಡೆದರು. ಟೆಸ್ಟ್ ತಂಡದಲ್ಲಿಯೂ ಅವಕಾಶ ಪಡೆದು ಮೂರೂ ಮಾದರಿಗಳಲ್ಲಿ ಭಾರತದ ಪ್ರಮುಖ ಆಟಗಾರ ಎನಿಸಿದರು. ಐಪಿಎಲ್ ಮೂಲಕ ಗಮನ ಸೆಳೆದರೂ ಟೆಸ್ಟ್ ಮಾದರಿಯಲ್ಲಿ ತಾವೊಬ್ಬ ಆಲ್‌ರೌಂಡರ್ ಎನ್ನುವುದನ್ನು ಸಾಬೀತು ಮಾಡಿದರು. ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್‌ನಲ್ಲಿ 31 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಇದು ಇಂಗ್ಲೆಂಡ್ ನೆಲದಲ್ಲಿ ಟೆಸ್ಟ್‌ನಲ್ಲಿ ದಾಖಲಾದ ವೇಗದ ಅರ್ಧಶತಕ ಎನ್ನುವ ದಾಖಲೆಗೂ ಪಾತ್ರವಾಯಿತು. 1986ರಲ್ಲಿ ದ ಓವಲ್‌ನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಇಂಗ್ಲೆಂಡ್ ತಂಡದ ಮಾಜಿ ಆಟಗಾರ ಇಯಾನ್ ಬಾಥಮ್ ನ್ಯೂಜಿಲೆಂಡ್ ವಿರುದ್ಧ 32 ಎಸೆತಗಳಲ್ಲಿ ಅರ್ಧಶತಕ ಗಳಿಸಿದ್ದು ಹಿಂದಿನ ದಾಖಲೆಯಾಗಿತ್ತು.







## ಯಜುವೇಂದ್ರ ಚಹಲ್

ಹರಿಯಾಣದ ಯಜುವೇಂದ್ರ 2011ರಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿದ್ದರು. ಬಳಿಕ ಆರ್‌ಸಿಬಿ ಸೇರಿದರು. ದೇಶಿ ಟೂರ್ನಿ ಮತ್ತು ಐಪಿಎಲ್‌ನಲ್ಲಿನ ಪ್ರದರ್ಶನದಿಂದಾಗಿ 2016ರಲ್ಲಿ ಜಿಂಬಾಬ್ವೆ ವಿರುದ್ಧದ ಏಕದಿನ ಸರಣಿಗೆ ಭಾರತ ತಂಡದಲ್ಲಿ ಅವಕಾಶ ಲಭಿಸಿತು. ಅದೇ ವರ್ಷ ಜಿಂಬಾಬ್ವೆ ವಿರುದ್ಧವೇ ಟಿ–20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಪದಾರ್ಪಣೆ ಮಾಡಿದರು. 2017ರಲ್ಲಿ ಇಂಗ್ಲೆಂಡ್ ವಿರುದ್ಧ ಟಿ–20 ಪಂದ್ಯದಲ್ಲಿ ಐದು ವಿಕೆಟ್‌ಗಳನ್ನು ಕಬಳಿಸಿದರು. ಈ ಮಾದರಿಯಲ್ಲಿ ಒಂದೇ ಪಂದ್ಯದಲ್ಲಿ ಐದು ವಿಕೆಟ್ ಕಬಳಿಸಿದ ಭಾರತದ ಮೊದಲ ವೇಗದ ಬೌಲರ್ ಎನ್ನುವ ಕೀರ್ತಿಗೂ ಭಾಜನರಾಗಿದ್ದರು.

ಕಾರಣಕ್ಕೆ ಐಸಿಸಿ ತಂಡಗಳ ಪಾಲ್ಗೊಳ್ಳುವಿಕೆಗೆ ಸಂಖ್ಯೆಯಲ್ಲಿ ಮೇಲಿಂದ ಮೇಲೆ ಪರಿಷ್ಕರಣೆ ಮಾಡುತ್ತಿದೆ. 2024ರಿಂದ 2030ರ ವರೆಗಿನ ಟಿ–20 ವಿಶ್ವಕಪ್ ಟೂರ್ನಿಗಳಲ್ಲಿ ಒಟ್ಟು 20 ತಂಡಗಳಿಗೆ ಅವಕಾಶ ಕೊಡಲಾಗುವುದು ಎಂದು ಐಸಿಸಿ ಈಗಾಗಲೇ ತಿಳಿಸಿದೆ.

ಐಪಿಎಲ್ 14ನೇ ಆವೃತ್ತಿ ಇದೇ ವರ್ಷದ ಏಪ್ರಿಲ್ 9ರಂದು ಶುರುವಾಗಿತ್ತು. ಮೊದಲ 29 ಪಂದ್ಯಗಳಷ್ಟೇ ನಡೆದವು. ಕೋವಿಡ್ ಕಾರಣ ಮುಂದೂಡಿ ಈಗ ಮತ್ತೆ ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ. ಈ ಟೂರ್ನಿಯಲ್ಲಿ 31 ಪಂದ್ಯಗಳು ಬಾಕಿ ಉಳಿದಿವೆ. ವಿಶ್ವಕಪ್ ಟೂರ್ನಿಯಲ್ಲಿ ಒಟ್ಟು 45 ಪಂದ್ಯಗಳು ನಡೆಯುತ್ತವೆ. ಹೀಗಾಗಿ ಬಹುತೇಕ ಎರಡು ತಿಂಗಳ ಅವಧಿಯಲ್ಲಿ ಚುಟುಕು ಕ್ರಿಕೆಟ್ ಪ್ರಿಯರಿಗೆ ಒಟ್ಟು 76 ಪಂದ್ಯಗಳನ್ನು ಸಂಭ್ರಮಿಸುವ ಅವಕಾಶ ಲಭಿಸಲಿದೆ.

## ಕಾರ್ಮುಗಿಲ ನಡುವಿನ ಕೋಲ್ಮಿಂಚು

‘ಐಪಿಎಲ್’ ಮತ್ತು ‘ಟ್ವೆಂಟಿ–20’ ಕ್ರಿಕೆಟ್ ನಡೆಯುತ್ತಿರುವುದು ಕೊರೊನಾ ಆತಂಕದ ಸಂದರ್ಭದಲ್ಲಿ. ಸೋಂಕಿನ ಭೀತಿಯನ್ನು ಮೀರಿ ಆಟಗಾರರು ಕ್ರಿಕೆಟ್ ಅನ್ನು ಕಳೆಗಟ್ಟಿಸಲು ಪ್ರಯತ್ನಿಸುತ್ತಿದ್ದರೆ, ಸೋಂಕಿನ ಆತಂಕವನ್ನು ಮರೆತು ಆಟದ ಸಂತೋಷವನ್ನು ಸವಿಯಲು ಕ್ರೀಡಾಪ್ರಿಯರು ಸಜ್ಜಾಗಿದ್ದಾರೆ. ಮನಸ್ಸಿನ ನೋವನ್ನು ಶಮನಗೊಳಿಸುವ ಶಕ್ತಿ ಆಟಕ್ಕಿದೆ. ಚುಟುಕು ಕ್ರಿಕೆಟ್ ಅಂತೂ ಜಡ ಮನಸ್ಸಿನಲ್ಲೂ ಜೀವಂತಿಕೆಯನ್ನು ಪುಟಿಸುವ ಶಕ್ತಿಯುಳ್ಳದ್ದು. ಈ ಆಟದ ವ್ಯಾಪಾರಿ ಗುಣಗಳೇನೇ ಇರಲಿ – ಹೊಸ ಆಟಗಾರರಿಗೆ, ಅದರಲ್ಲೂ ಗ್ರಾಮೀಣ ಹಾಗೂ ಬಡ ವರ್ಗಗಳ ಪ್ರತಿಭಾವಂತರಿಗೆ ಬದುಕು ಕಟ್ಟಿಕೊಳ್ಳಲು ಚುಟುಕು ಕ್ರಿಕೆಟ್ ಅವಕಾಶ ಕಲ್ಪಿಸಿದೆ. ಆ ಮಟ್ಟಿಗೆ ಟ್ವೆಂಟಿ–20 ಕ್ರಿಕೆಟ್‌ಗೆ ಆಟದಾಚೆಗಿನ ಜೀವಪರ ಗುಣವೂ ಇದೆ.

ಪ್ರತಿಕ್ರಿಯಿಸಿ: feedback@sudha.co.in